ಕರ್ನಾಟಕ ಸರ್ಕಾರ
GOVERNMENT OF KARNATAKA
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DSERT
DEPARTMENT OF STATE EDUCATIONAL RESEARCH AND TRAINING
No.4, 100 Ft RING ROAD, BANASHANKARI, 3rd STAGE BENGALURU - 085
26422372
26422373
26422374
Fax 26422377

ಸಂಖ್ಯೆ: ಸರಿಕ್/ಗ್ರಂ/ಬೋ. ವ/01/2017-18

ದಿನಾಂಕ:18/10/2021

ಪ್ರಕಟಣೆ

ವಿಷಯ: ಸರಿಕ್ ಗ್ರಂಥಾಲಯದಲ್ಲಿ ಕೊಳವೆ ಬಾವಿ ದುರಸ್ತಿ ಮಾಡಿಸಲು

ದರಪಟ್ಟಿಯನ್ನು ಕರೆಯುವ ಬಗ್ಗೆ.

ವಿಷಯಕ್ಕೆ ಸಂಬಂಧಿಸಿದಂತೆ, ಸರಿಕ್ ಗ್ರಂಥಾಲಯ, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿ ಕೊಳವೆಬಾವಿಯು ಹಾಳಾಗಿದ್ದು, ಇದನ್ನು ದುರಸ್ತಿಗೊಳಿಸಬೇಕಾಗಿರುತ್ತದೆ. ಈ ಸಂಬಂಧ ದರಪಟ್ಟಿಯನ್ನು ಕರೆಯಲಾಗಿದೆ. ಆಸಕ್ತಿಯುಳ್ಳವರು ಕಛೇರಿಗೆ ಭೇಟಿ ನೀಡಿ ಪರಿಶೀಲಿಸಿ ನಂತರ ದರಪಟ್ಟಿಯನ್ನು ಸಲ್ಲಿಸಲು ಕೋರಲಾಗಿದೆ. ಆಸಕ್ತಿಯುಳ್ಳ ಸಂಸ್ಥೆಯವರು ಈ ಗ್ರಂಥಾಲಯದ ಸೂಚನಾ ಫಲಕ ಹಾಗೂ ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವ ಪ್ರಕಟಣೆಯನ್ನು ಪರಿಶೀಲಿಸಿ, ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಸರಿಕ್ ಗ್ರಂಥಾಲಯ, ಶೇಷಾದ್ರಿಪುರಂ, ಬೆಂಗಳೂರು ಇಲ್ಲಿಗೆ ಮುಚ್ಚಿದ ಲಕೋಟೆಯಲ್ಲಿ ದರಪಟ್ಟಿಯನ್ನು ದಿನಾಂಕ:06/11/2021ರ ಸಂಜೆ 5-00 ಗಂಟೆಯೊಳಗೆ ಸಲ್ಲಿಸುವುದು. ವಿಳಂಬವಾದ ದರಪಟ್ಟಿ ಸ್ವೀಕೃತಿಗೆ ಈ ಗ್ರಂಥಾಲಯ ಜವಾಬ್ದಾರಿ ಆಗುವುದಿಲ್ಲ. ಲಕೋಟೆಯ ಮೇಲೆ " **ಕೊಳವೆ ಬಾವಿ ದುರಸ್ತಿಗೊಳಿಸುವ** ಬಗ್ಗೆ ದರಪಟ್ಟಿ " ಎಂಬುದಾಗಿ ನಮೂದಿಸತಕ್ಕದ್ದು.

ನಿಬಂಧನೆಗಳು:

1. ಕೊಟೇಶನ್‌ಗಳು ಕೆ ಟಿ ಪಿ ಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು. ಕೊಳವೆ ಬಾವಿ ದುರಸ್ತಿಗೊಳಿಸುವ ಕಾರ್ಯಕ್ಕೆ ಸಂಬಂಧಿಸಿದಂತೆ ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ.
2. ಕೊಳವೆ ಬಾವಿ ದುರಸ್ತಿಗೊಳಿಸುವ ಸಂಬಂಧ ಆಯ್ಕೆಯಾಗುವ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
3. ದರಪಟ್ಟಿಯು ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ ಇರತಕ್ಕದ್ದು.
4. ಸರಬರಾಜು ಬಿಲ್ಲು ಸ್ವೀಕೃತವಾದ ದಿನಾಂಕದಿಂದ ಕನಿಷ್ಠ 20 ರಿಂದ 30 ದಿನಗಳ ಒಳಗಾಗಿ ಕೆ-2 ಇ-ಪಾವತಿ ಮುಖಾಂತರ ಪರಿಶೀಲಿಸಿ ನಿಯಮಾನುಸಾರ ಪಾವತಿ ಕ್ರಮಗಳನ್ನು ಕೈಗೊಳ್ಳಲಾಗುವುದು.
5. ಕೊಟೇಶನ್ ಅನ್ನು ಪರಿಶೀಲಿಸಿದ ನಂತರದಲ್ಲಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ನಿರ್ದೇಶಕರಿಗೆ ಇರುತ್ತದೆ.
6. ಸಂಬಂಧಪಟ್ಟವರ ಖಾತೆ ವಿವರ ಹಾಗೂ ಪೂರ್ಣ ವಿವರ ನೀಡುವುದು

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ., ಬೆಂಗಳೂರು